ಈ. ಈ ವರ್ಷದಲ್ಲಿ ಮಾಡಲಾಗುವುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ. ಹೌದು

ಆ. ಹೌದು

ಇ. ಮತ್ತು ಈ ಪರಿಶೀಲಿಸಲಾಗುತ್ತಿದೆ.

ದಾಸರಹಳ್ಳಿ ನಗರಸಭೆಯಲ್ಲಿ ಕುಡಿಯುವ ನೀರಿನ ಸಮಸ್ಯೆ

1921(1541) ಶ್ರೀ ನಂಜುಂಡಸ್ವಾಮಿ ಜಿ.ಎನ್. (ಕೊಳ್ಳೇಗಾಲ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ದಾಸರಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಬಂದಿದ್ದಲ್ಲಿ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮ ಏನು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ. ಬಂದಿದೆ.

ಆ. 28 ಕೊಳವೆ ಬಾವಿಗಳನ್ನು ಹೊಸದಾಗಿ ಕೊರೆಸಲಾಗಿರುತ್ತದೆ. ಹಾಗೂ 15 ಪಂಪ್ ಮತ್ತು ಮೋಟಾರುಗಳನ್ನು ಅಳವಡಿಸುವ ಕೆಲಸವು ಪ್ರಗತಿಯಲ್ಲಿದೆ. ಅಭಾವ ಪರಿಹಾರ ನಿಧಿಯಿಂದ 17 ಕೊಳವೆ ಬಾವಿಗಳನ್ನು ಮರು ಕೊರೆದು ಅಳವಡಿಸಲಾಗಿರುತ್ತದೆ. ತುಂಬಾ ಅಭಾವ ಇರುವ ವಾರ್ಡ್‌ಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

ರಾಜ್ಯದಲ್ಲಿ ದಲಿತರ ಮೇಲೆ ಆಗುತ್ತಿರುವ ಹಲ್ಲೆಗಳು

1922 (1677) ಶ್ರೀ ನಾರಾಯಣಸ್ವಾಮಿ ಎ. (ಆನೇಕಲ್) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಇತ್ತೀಚೆಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ (ದಲಿತ)ವರ ಮೇಲೆ ಹಲ್ಲೆಗೊಳಗಾದ ಪ್ರಸಂಗ ನಡೆದಿದೆಯೇ;

ಆ. ಯಾವ ಯಾವ ಭಾಗಗಳಲ್ಲಿ ಈ ಕೃತ್ಯ ನಡೆದಿದೆ; ಇದಕ್ಕೆ ಕಾರಣಗಳೇನು;

ಇ. ಕಳೆದ ಒಂದು ವರ್ಷದಿಂದ ಈ ರೀತಿಯ ಹಲ್ಲೆಗೊಳಗಾದ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರಗಳನ್ನು ನೀಡುವುದು);

ಈ. ಹಲ್ಲೆ ಪ್ರಕರಣದಡಿಯಲ್ಲಿ ಎಷ್ಟು ದೂರುಗಳು ದಾಖಲಾಗಿವೆಯೇ; ಈ ಪೈಕಿ ಎಷ್ಟು ಪ್ರಕರಣದಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಿ ಶಿಕ್ಷೆಗೊಳಪಡಿಸಲಾಗಿದೆ;

ಉ. ಹಲ್ಲೆಗೆ ಒಳಗಾದವರಿಗೆ ಯಾವ ಪರಿಹಾರ ನೀಡಲಾಗಿದೆ? (ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ. ಹೌದು

ಆ. ಅನುಬಂಧ 'ಅ'ದಲ್ಲಿ ಸೂಚಿಸಿರುವ ಜಿಲ್ಲೆಗಳ ಅನೇಕ ತಾಲ್ಲೂಕು ಕೇಂದ್ರಗಳು, ಪಟ್ಟಣಗಳು, ನಗರ ಪ್ರದೇಶಗಳು ಹಾಗೂ ಹಳ್ಳಿಗಳಲ್ಲಿ ಈ ಕೃತ್ಯಗಳು ನಡೆದಿರುತ್ತವೆ.